# ಪ್ರಾರ್ಥನೆ

( ದೇವೀಸ್ತುತಿ )

ದೇವಿ ಪ್ರಪನ್ನಾರ್ತಿಹರೇ ಪ್ರಸೀದ
ಪ್ರಸೀದ ಮಾತರ್ಜಗತೋಽಖಿಲಸ್ಯ |
ಪ್ರಸೀದ ವಿಶ್ವೇಶ್ವರಿ ಪಾಹಿ ವಿಶ್ವಂ
ತ್ವಮೀಶ್ವರೀ ದೇವಿ ಚರಾಚರಸ್ಯ ||

ಆಧಾರಭೂತಾ ಜಗತಸ್ತ್ವಮೇಕಾ
ಮಹೀಸ್ವರೂಪೇಣ ಯತಃ ಸ್ಥಿತಾಽಸಿ |
ಅಪಾಂ ಸ್ವರೂಪಸ್ಥಿತಯಾ ತ್ವಯೈತತ್
ಆಪ್ಯಾಯತೇ ಕೃತ್ಸ್ನಮಲಂಘ್ಯವೀರ್ಯೇ ||

ತ್ವಂ ವೈಷ್ಣವೀಶಕ್ತಿರನಂತವೀರ್ಯಾ
ವಿಶ್ವಸ್ಯ ಬೀಜಂ ಪರಮಾಽಸಿ ಮಾಯಾ |
ಸಂಮೋಹಿತಂ ದೇವಿ ಸಮಸ್ತಮೇತತ್
ತ್ವಂ ವೈ ಪ್ರಸನ್ನಾ ಭುವಿ ಮುಕ್ತಿಹೇತುಃ ||

ವಿದ್ಯಾಃ ಸಮಸ್ತಾಸ್ತವ ದೇವಿ ಭೇದಾಃ
ಸ್ತ್ರಿಯಃ ಸಮಸ್ತಾಃ ಸಕಲಾ ಜಗತ್ಸು |
ತ್ವಯೈಕಯಾ ಪೂರಿತಮಂಬಯೈತತ್
ಕಾ ತೇ ಸ್ತುತಿಃ ಸ್ತವ್ಯಪರಾಪರೋಕ್ತಿಃ ||

ಹೇ ಭಕ್ತದುಃಖಹಾರಿಣಿ, ನಮ್ಮಲ್ಲಿ ಪ್ರಸನ್ನಳಾಗು, ಹೇ ನಿಖಿಲ ವಿಶ್ವಜನನಿ, ಪ್ರಸನ್ನಳಾಗು ; ಹೇ ವಿಶ್ವೇಶ್ವರಿ, ನಮ್ಮನ್ನು ಅನುಗ್ರಹಿಸಿ ಜಗತ್ತನ್ನೆಲ್ಲ ಕಾಪಾಡು ; ಹೇ ದೇವಿ, ಚರಾಚರ ಜಗತ್ತಿಗೆಲ್ಲ ನೀನೇ ಈಶ್ವರಿ.

ಅತಿಕ್ರಮಿಸಲಾಗದ ಶಕ್ತಿಯುಳ್ಳವಳೇ, ಪ್ರಪಂಚಕ್ಕೆಲ್ಲ ನೀನೊಬ್ಬಳೇ ಅವಲಂಬನವಾಗಿರುವೆ ; ಏಕೆಂದರೆ ನೀನು ಈ ಭೂಮಿಯ ರೂಪವನ್ನು ಧರಿಸಿ ಎಲ್ಲಕ್ಕೂ ಆಶ್ರಯವನ್ನು ಕೊಟ್ಟಿರುವೆ ; ನೀರಿನ ಸ್ವರೂಪದಲ್ಲಿರುವ ನಿನ್ನಿಂದ ಈ ಪ್ರಪಂಚವೆಲ್ಲ ಪುಷ್ಟಿಯನ್ನು ಹೊಂದುವುದು.

ಹೇ ದೇವಿ, ಅನಂತವೀರ್ಯವುಳ್ಳ ವಿಷ್ಣುವಿನ ಶಕ್ತಿಯೂ ನೀನೇ; ವಿಶ್ವದ ಆದಿಕಾರಣವಾದ ಮಹಾಮಾಯೆಯೂ ನೀನೇ ; ಜಗತ್ತನ್ನೆಲ್ಲ ಮೋಹಗೊಳಿಸುತ್ತಿರುವವಳೂ ನೀನೇ ; ನೀನು ಪ್ರಸನ್ನಳಾದರೆ , ಮುಕ್ತಿಗೆ ನೀನೇ ಕಾರಣಳಾಗುತ್ತೀಯೆ.

ಹೇ ದೇವಿ, ಸಕಲವಿದ್ಯೆಗಳೂ ನಿನ್ನ ಅಂಶಗಳು; ಸಕಲ ಸ್ತ್ರೀಯರೂ ಕೂಡ ನಿನ್ನ ಆವಿರ್ಭಾವವೇ ; ನಿನ್ನೊಬ್ಬಳಿಂದಲೇ ಈ ಪ್ರಪಂಚ ವ್ಯಾಪ್ತವಾಗಿದೆ; ಸ್ತೋತ್ರದಲ್ಲಿ ಬರುವ ಮುಖ್ಯವಾದ ಮಾತು ಮತ್ತು ಗೌಣವಾದ ಮಾತುಗಳೂ ನೀನೇ ಆಗಿರುವುದರಿಂದ, ತಾಯಿ, ನಿನ್ನನ್ನು ಹೇಗೆ ತಾನೇ ಸ್ತುತಿಸುವುದು ?

# ಸೂಕ್ತಿಪ್ರಭ

ನೀನು ಶತ್ರುವಿಗಾಗಿ ಹೊತ್ತಿಸುವ ಬೆಂಕಿ ನಿನ್ನನ್ನೇ ಹೆಚ್ಚು ಸುಡುತ್ತದೆ. —ಚೀನೀ ಗಾದೆ

ನಾನು ಸ್ನೇಹಿತನನ್ನು ಅರಸಿಕೊಂಡು ಹೋದೆ, ಎಲ್ಲಿಯೂ ಸಿಗಲಿಲ್ಲ. ನಾನೇ ಸ್ನೇಹಿತನಾಗಿ ಹೋದೆ, ಆಗ ಎಲ್ಲೆಲ್ಲಿಯೂ ಸ್ನೇಹಿತರೇ. —ಅನಾಮಿಕ

ಒಬ್ಬ ವ್ಯಕ್ತಿಯಲ್ಲಿ ಉಪದೇಶ ನೀಡಬೇಕೆಂಬ ಆಸೆ ತುಂಬ ಇದ್ದರೆ, ಆ ವ್ಯಕ್ತಿಗೆ ಉಪದೇಶದ ಆವಶ್ಯಕತೆ ತುಂಬ ಇದೆ ಎಂದರ್ಥ. —ಲಾರ್ಡ್ ಹ್ಯಾಲಿಫಾಕ್ಸ್ (Halifax)

ಎಲ್ಲ ಆಕ್ಷೇಪಣೆಗಳನ್ನೂ ಪರಿಹರಿಸುವುದರಲ್ಲಿಯೇ ನಾವು ಮಗ್ನರಾಗಿಬಿಟ್ಟರೆ ಏನನ್ನೂ ಸಾಧಿಸಲಾಗುವುದೇ ಇಲ್ಲ.
—ಸ್ಯಾಮುಯಲ್ ಜಾನ್ಸನ್ (Samuel Johnson)

ಹೋರಾಟ ಮತ್ತು ದುಃಖಗಳು ನಿಮ್ಮ ಶಕ್ತಿಯನ್ನು ವೃದ್ಧಿಸುತ್ತವೆ ಮತ್ತು ನಿಮ್ಮ ಮುಂದಿರುವ ಕಾರ್ಯಕ್ಕೆ ನಿಮ್ಮನ್ನು ಸಿದ್ಧಗೊಳಿಸುತ್ತವೆ ಎಂಬುದನ್ನು ಮರೆಯಬೇಡಿ.
—ಸಾಧು ವಾಸ್ವಾನಿ

ಕೋಪಗೊಂಡ ವ್ಯಕ್ತಿ ಬಾಯಿ ತೆರೆಯುತ್ತಾನೆ ಮತ್ತು ಕಣ್ಣು ಮುಚ್ಚಿಕೊಳ್ಳುತ್ತಾನೆ. —ಅನಾಮಿಕ

ಸುಖಂ ಶೇತೇ ಸತ್ಯವಕ್ತಾ ಸುಖಂ ಶೇತೇ ಮಿತವ್ಯಯೀ |
ಹಿತಭುಕ್ ಮಿತಭುಕ್ ಚೈವ ತಥೈವ ವಿಜಿತೇಂದ್ರಿಯಃ ||

ಸತ್ಯವಾದಿಯೂ ಮಿತವ್ಯಯ ಮಾಡುವವನೂ ಹಿತವಾಗಿ ಮಿತವಾಗಿ ಉಣ್ಣುವವನೂ ಇಂದ್ರಿಯನಿಗ್ರಹ ಉಳ್ಳವನೂ ಸುಖವಾಗಿ ನಿದ್ರಿಸುತ್ತಾನೆ. —ಸುಭಾಷಿತ.